

# ಮಾನವ ಬೈಸಿಕಲ್!



ಮಾನವ ಸರಪಣಿ ಕೇಳಿದ್ದೀರಿ, ಮಾನವನ ಮೂಲಕ ನಿರ್ಮಿಸಿದ ಹಲವು ಆಕೃತಿಗಳನ್ನು ನೋಡಿದ್ದೇವೆ. ಇದೀಗ ಬೈಸಿಕಲ್ ಸರದಿ. ಈ ಬಿಳಿ ಬೈಸಿಕಲ್ ನೋಡಲು ಆಕರ್ಷಕ ಅಲ್ಲವೇ? ಆದರೆ ಇದು ಬೈಸಿಕಲ್ ಅಲ್ಲ; ಅದೇ ರೂಪದ ಮಾನವ ಪ್ರತಿಬಿಂಬ. ಶಾಲಾ ಮಕ್ಕಳು, ಶಿಕ್ಷಕರು ಮತ್ತು ಪಾಲಕರು ಒಟ್ಟಾರೆ 1799 ಜನ ಸೇರಿಕೊಂಡು ಮಾಡಿದ ಮಾನವ ಬೈಸಿಕಲ್ ಇದು. ಜಾಗತಿಕ ಗಿನ್ನೆಸ್ ದಾಖಲೆಯೊಂದನ್ನು ಇದೇ ವರ್ಷ ಜೂನ್‌ನಲ್ಲಿ ಮಾಡಿದರು.

ಅಕ್ಲೆಂಡಿನ ಗ್ಲೆನ್ ಈಡನ್ ಇಂಟರ್ ಮಿಡಿಯೇಟ್‌ನ ಆಟದ ಮೈದಾನದಲ್ಲಿ ರಚಿಸಿದ ಅತ್ಯಂತ ದೊಡ್ಡ ಬೈಸಿಕಲ್ ನ ಮಾನವ ಪ್ರತಿಬಿಂಬವಿದು. ಇವರೆಲ್ಲ ಸೇರಿ ರಚಿಸಿದ ಬೈಸಿಕಲ್ ನ ಮಾನವ ಪ್ರತಿಬಿಂಬ ಐದು ನಿಮಿಷಗಳವರೆಗೆ ಹಾಗೆಯೇ ಇತ್ತು. ಅಕ್ಕಪಕ್ಕದ ಬೇರೆ ಬೇರೆ ಶಾಲೆಯಿಂದಲೂ ಮಕ್ಕಳು ಇಲ್ಲಿಗೆ ಬಂದು ಪಾಲ್ಗೊಂಡಿದ್ದರು. ಜಾಗತಿಕ ಗಿನ್ನೆಸ್ ದಾಖಲೆಯ ಸಂಸ್ಥೆಯ ಅಧಿಕಾರಿಗಳು ಈ ಘಟನೆಯನ್ನು ಡ್ರೋನಿನಿಂದ ಚಿತ್ರೀಕರಿಸಿಕೊಂಡರು. ಈ ಹಿಂದಿನ ದಾಖಲೆ 1148 ಸದಸ್ಯರಿದ್ದ ಇಂಗ್ಲೆಂಡಿನದಾಗಿತ್ತು.

■ ಪ್ರಕಾಶ ಎಸ್.ಮನ್ನಂಗಿ